ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಇವರು ನಿಬಂಧನೆಗಳಿಗೆ ಒಪ್ಪುವೇ ಸಾಲ ತೆಗೆದುಕೊಂಡಿರುತ್ತಾರೆ. ಸಾಲ ತೆಗೆದುಕೊಂಡಾದ ಮೇಲೆ ಅವರು ಹಾಕುವ ಬಡ್ಡಿಯನ್ನು ನೋಡಿ, ಇವರ ಕೈಯಿಂದ ಬಿಡಿಸಿಕೊಂಡರೆ ಸಾಕು ಎನ್ನುವ ಸ್ಥಿತಿ ಇದೆ. ಇದು ರಿಡೆಂಟಿಂಟ್ ಆಗಿದೆ. ಇದನ್ನು ಸೆಟ್‌ರೈಟ್ ಮಾಡಲು ನಾನು ಪ್ರಯತ್ನಿಸುತ್ತೇನೆ.

(ಎ) ಆಟೋರಿಕ್ಷಾಗಳಿಗೆ ನಿರ್ದಿಷ್ಟಪಡಿಸಿದಂಥ ದರ ನಿಗಧಿ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತಿರತಕ್ಕಂಥ ಪ್ರಶ್ನೆ ಪೋಲೀಸರಿಗೆ ಸಂಬಂಧಪಟ್ಟಿದ್ದು ಬೆಂಗಳೂರು ನಗರದಲ್ಲಿ ಸಾರಿಗೆ ಇಲಾಖೆ ಮತ್ತು ಪೋಲೀಸ್ ಇಲಾಖೆಯವರು ಆಟೋರಿಕ್ಷಾದವರ ಜೊತೆ ಚರ್ಚೆ ಮಾಡಿ ಒಂದು ನಿರ್ದಿಷ್ಟಪಡಿಸಿದಂಥ ದರವನ್ನು ನಿಗಧಿ ಮಾಡಿದ್ದಾರೆ. ಮಹಾನಗರ ಪಾಲಿಕೆಯೊಳಗಡೆ ಓಡುವಂಥ ಆಟೋರಿಕ್ಷಾಗಳಿಗೆ ಎಷ್ಟು ಕಿ.ಮೀ.ಗೆ ಎಷ್ಟು ಹಣ ಯಾವ ಯಾವ ಪಾಯಿಂಟ್‌ಗೆ ಎಷ್ಟು ಹಣ ಎಂದು ನಿರ್ಧಾರ ಮಾಡಿದ್ದಾರೆ. ಅದರಂತೆ ನ್ಯಾಯಯುತವಾಗಿ ಮೀಟರ್‌ನ್ನು ಹಾಕಿ ಓಡಿಸುತ್ತಿದ್ದಾರೆ. ಆದರೆ ಕಳೆದ 2-3 ತಿಂಗಳಿಂದ, ಒಬ್ಬ ಪೋಲೀಸ್ ಅಧಿಕಾರಿಯ ಕಾರ್ಯತಂತ್ರದಿಂದ ಮಹಾನಗರಪಾಲಿಕೆಯ ಒಳಗಡೆ ಆಟೋರಿಕ್ಷಾಗಳಿಗೆ ಎರಡುರೀತಿಯ ಚಾರ್ಜ್‌ನ್ನು ವಸೂಲು ಮಾಡುತ್ತಿದ್ದಾರೆ. 2-3 ತಿಂಗಳಿಂದ ಸಾವಿರಾರು ಪ್ರಯಾಣಿಕರು ಗೋಳಾಡುತ್ತಿದ್ದಾರೆ. ಬೇರೆ ಕಡೆ ಆಟೋ ಹತ್ತುವುದಕ್ಕೂ, ರೈಲ್ವೆಸ್ಟೇಷನ್‌ನಲ್ಲಿ ಹತ್ತುವುದಕ್ಕೂ ಬಹಳ ವ್ಯತ್ಯಾಸವಿದೆ. ರೈಲ್ವೆಸ್ಟೇಷನ್‌ನಲ್ಲಿ ಆಟೋ ಹತ್ತಿದರೆ ಒಂದಕ್ಕೆ ಎರಡರಷ್ಟು ಚಾರ್ಜ್ ಕೊಡಬೇಕು. ಅಲ್ಲಿ ಪ್ರೀ-ಪೇಡ್ ಆಟೋರಿಕ್ಷಾ ನಿಲ್ದಾಣ ಎಂದು ಮಾಡಿದ್ದಾರೆ. ರೈಲ್ವೆ ಸ್ಟೇಷನ್‌ನಲ್ಲಿ ಇಳಿದ ತಕ್ಷಣ ಪ್ರಯಾಣಿಕರೆಲ್ಲರೂ ಅಲ್ಲಿಗೆ ಹೋಗಬೇಕು. ಇಲ್ಲದಿದ್ದರೆ ಪೋಲೀಸರು ಅವರನ್ನು ತಡೆದು ಅಲ್ಲಿಗೆ ಕಳುಹಿಸುತ್ತಾರೆ. ಪ್ರೀಪೇಡ್ ರಸೀತಿ ತೆಗೆದುಕೊಳ್ಳದಿದ್ದರೆ ಆಟೋ ಹತ್ತಲು ಬಿಡುವುದಿಲ್ಲ. ಈ ಬಗ್ಗೆ ನಾನು 2-3 ಸಲ ಮಾತನಾಡಿದ್ದೇನೆ. ಮಾನ್ಯ ಗೃಹ ಸಚಿವರಿಗೆ ಪತ್ರ ಬರೆದಿದ್ದೇನೆ, ಮಾನ್ಯ ಸಾರಿಗೆ ಸಚಿವರಿಗೆ ಪತ್ರ ಬರೆದಿದ್ದೇನೆ. ಪೋಲೀಸ್ ಅಧಿಕಾರಿಗಳಿಗೂ ಪತ್ರ ಬರೆದಿದ್ದೇನೆ, ಅವರಿಂದ ಉತ್ತರವೂ ಇಲ್ಲ ಮತ್ತು ದರದಲ್ಲಿ ವ್ಯತ್ಯಾಸವನ್ನೂ ಮಾಡಲಿಲ್ಲ. ರೈಲ್ವೆಸ್ಟೇಷನ್‌ನಿಂದ ಕಾಸಗರ ಭವನಕ್ಕೆ ಬಂದರೆ ಮೀಟರ್‌ನಲ್ಲಿ 10 ರೂಪಾಯಿ 80 ಪೈಸೆ ಚಾರ್ಜ್ ಆಗುತ್ತದೆ. ಆದರೆ ಕಳೆದ 3 ತಿಂಗಳಿಂದ ಪ್ರೀ-ಪೇಡ್ ಆಟೋರಿಕ್ಷಾಗಳಲ್ಲಿ 19 ರೂಪಾಯಿ ಮಾಡಿದ್ದಾರೆ. ಈ ವ್ಯತ್ಯಾಸವನ್ನು ನಾವು ಮನಗಾಣಬೇಕು. ನಾನು ಶಾಸಕನಾಗಿ ಇಷ್ಟು ಹಣವನ್ನು ಕೊಡುವಂತಹದ್ದು ದೊಡ್ಡ ವಿಚಾರವಲ್ಲ ಇದರ ಬಗ್ಗೆ ಸಾಕಷ್ಟು ತೊಂದರೆಯನ್ನು ಅನುಭವಿಸಿರುವ ಪತ್ರಕರ್ತರು ಸಹ ಹಲವಾರು ಸಲ ಪತ್ರಿಕೆಗಳಲ್ಲಿ ಲೇಖನವನ್ನು ಬರೆದಿದ್ದಾರೆ. ಆದರೂ ಇದರ ಬಗ್ಗೆ ಯಾರೂ ಸಹ ಗಮನ ಹರಿಸಲಿಲ್ಲ. ಇದರ ಬಗ್ಗೆ ವಿಚಾರ ಮಾಡಿದರೆ ಇದನ್ನು ಮಾಡಿದ್ದು ಶ್ರೀ ಸಾಂಗ್ಲಿಯಾನರವರು ಎಂದು ಹೇಳುತ್ತಾರೆ. ಈ ರೀತಿ ಒಂದಕ್ಕೆ ಎರಡರಷ್ಟು ಬೆಲೆಯನ್ನು ನಿಗಧಿ ಮಾಡಲು ಅವರಿಗೆ ಅಧಿಕಾರ ಕೊಟ್ಟವರು ಯಾರು ? ಅವರು ಬೇಕಾಬಿಟ್ಟಿಯಾಗಿ ಅಧಿಕಾರವನ್ನು ಚಲಾಯಿಸುವುದಾದರೆ ಇಲ್ಲಿ ಸರ್ಕಾರ ಏಕೆ ಇರಬೇಕು ? ದಯಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದರಿಂದಾಗಿ ಕಳೆದ ಎರಡು ಮೂರು ತಿಂಗಳಿನಲ್ಲಿ ಲಕ್ಷಗಟ್ಟಲೆ ಹಣವನ್ನು ಲೂಟಿ ಮಾಡಿದ್ದಾರೆ. ಬಡ ಜನರು ಕಣ್ಣೀರು ಹಾಕುತ್ತಾರೆ. ಕಾಪವನ್ನು ಹಾಕಿ ವಿಧಿ ಇಲ್ಲದೆ ಆಟೋರಿಕ್ಷಾದಲ್ಲಿ ಹತ್ತಿಕೊಂಡು ಹೋಗುತ್ತಾರೆ. ಇದರ ಬಗ್ಗೆ ದಯವಿಟ್ಟು ಸರ್ಕಾರ ಗಮನಹರಿಸಿ ತಕ್ಷಣವೇ ಪೋಲೀಸ್ ಇಲಾಖೆಯಿಂದ ಅದನ್ನು ತಪ್ಪಿಸಬೇಕು. ಮತ್ತು ಏಕರೀತಿಯ ಆಟೋರಿಕ್ಷಾ ದರವನ್ನು ನಿಗಧಿ ಮಾಡಬೇಕು ಎಂದು ನಾನು ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು): ಮಾನ್ಯ ಅಧ್ಯಕ್ಷರೆ, ಪ್ರೀ-ಪೇಡ್ ಆಟೋರಿಕ್ಷಾ ಪದ್ಧತಿಯನ್ನು ಪ್ರಾರಂಭ ಮಾಡಿದ್ದು ಏಕೆಂದರೆ, ರೈಲಿನಲ್ಲಿ ಬಂದ ಅನೇಕ ಪ್ರಯಾಣಿಕರಿಗೆ ಯಾವುದಾದರು Extension Areaಕ್ಕೆ ಹೋಗಬೇಕಾದರೆ ಆಟೋದವರು ದುಪ್ಪಟ್ಟು, ಮೂರುಪಟ್ಟು ದರವನ್ನು ಕೇಳತಕ್ಕದ್ದು, ಇಲ್ಲದಿದ್ದರೆ ನಾವು ಬರುವುದಿಲ್ಲವೆಂದು ಹೇಳತಕ್ಕದ್ದು, ಮುಂಚಾನೆ ಬಂದಂಥ ಪ್ರಯಾಣಿಕರಿಗೆ ಅವರು ಹೋಗಬೇಕಾಗಿದ್ದ ಸ್ಥಳಕ್ಕೆ ಹೋಗಲು ಆಟೋದವರು ನಿರಾಕರಿಸುವುದು ಮುಂತಾದವು ನಡೆದಿತ್ತು. ಅದನ್ನು ಒಂದು ರೀತಿಯಲ್ಲಿ ಸಿಸ್ಟಮ್ಯಾಟಿಕ್ ಆಗಿ ಮಾಡಬೇಕು ಎಂಬ ದೃಷ್ಟಿಯಿಂದ ಈ ಪ್ರಿ-ಪೇಡ್ ಪದ್ಧತಿಯನ್ನು ಜಾರಿ ಮಾಡಿದ್ದಾರೆ. ಶ್ರೀ ಸಾಂಗ್ಲಿಯಾನರವರು ತಮಗೆ ಬೇಕೆಂದು ಇದನ್ನು ಮಾಡಿದ್ದಲ್ಲ ಮತ್ತು ಇದರಲ್ಲಿ ಲಕ್ಷಾಂತರ ರೂಪಾಯಿಗಳ ಹಣವನ್ನು ಲೂಟಿ ಮಾಡಲು ಮಾಡಿದ್ದಲ್ಲ. ಜನರಿಗೆ ಅನುಕೂಲವಾಗಲಿ ಎಂದು ಮಾಡಿದ್ದು. ತಮಗೆ ಗೊತ್ತಿರಬಹುದು, ಆಟೋರಿಕ್ಷಾದವರು ಜಯನಗರಕ್ಕೆ ಬರುತ್ತೀಯ ಎಂದು ಕೇಳಿದರೆ ಇಷ್ಟು ಹಣವನ್ನು ಕೊಟ್ಟರೆ ಬರುತ್ತೇನೆ ಇಲ್ಲದಿದ್ದರೆ ಇಲ್ಲ ಎಂದು ಹೇಳುವುದು ಉಂಟು. ಆಟೋದವರು ಎಲ್ಲಿ ಹೋಗಲು ಇರುತ್ತದೋ ಅಲ್ಲಿಗೆ ಮಾತ್ರ ಹೋಗಲು ತಯಾರಾಗಿರುತ್ತಾರೆ. ಬೇರೆ ಕಡೆ ಹೋಗಲು ತಯಾರಿರುವುದಿಲ್ಲ. ಅದ್ದರಿಂದ ವಿಮಾನ ನಿಲ್ದಾಣದಲ್ಲಿ ಯಾವ ರೀತಿಯಲ್ಲಿ ಪ್ರೀ-ಪೇಡ್ ಟ್ಯಾಕಿ ಪದ್ಧತಿ ಇದೆ ಅದೇ ರೀತಿ ಇಲ್ಲಿಯೂ ಸಹ ಮಾಡಬೇಕು ಎಂಬ ಸದುದ್ದೇಶದಿಂದ ಅದನ್ನು ಮಾಡಿದ್ದಾರೆಯೇ ಹೊರತು ಇದರಲ್ಲಿ ಮತ್ತಾವುದೇ ದುರುದ್ದೇಶ ಇಲ್ಲ. ಇದರಲ್ಲಿ ಏನಾದರೂ ಅನಾನುಕೂಲತೆ ಇದೆಯೆಂದು ಹೇಳುವುದಾಗಿದ್ದರೆ ಖಂಡಿತವಾಗಿ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡೋಣ. ಆದರೆ ಅನೇಕ ಜನರು ಈ ಪದ್ಧತಿ ಚೆನ್ನಾಗಿದೆ, ದೂರ ದೂರದಿಂದ ಬರುವ ಬಹಳ ಜನ ಪ್ರಯಾಣಿಕರಿಗೆ ಅವರು ಇಚ್ಛಿಸಿದ ಸ್ಥಳಕ್ಕೆ ತಕ್ಷಣ ಹೋಗಲು ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಆ ರೀತಿ ಅನುಕೂಲ ಆಗಲಿ ಎಂಬ ದೃಷ್ಟಿಯಿಂದಲೇ ಇದನ್ನು ಮಾಡಿದ್ದು. ಒಂದು ವೇಳೆ ಇದರಿಂದ ಅನಾನುಕೂಲ ಆಗುತ್ತದೆಂದರೆ ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಈ ಆಟೋ ದರವನ್ನು ದುಪ್ಪಟ್ಟು ಮಾಡಿದ್ದಾರೆ. ಮೊದಲು ಆಟೋದವರು ಹೆರಾಸ್‌ಮೆಂಟ್ ಮಾಡುತ್ತಿದ್ದರು, ಈಗ ಇಲಾಖೆಯವರೇ ಹೆರಾಸ್‌ಮೆಂಟ್ ಮಾಡುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಮೊದಲು ಪ್ರಯಾಣಿಕರು ಕೇಳಿದಂಥ ಸ್ಥಳಕ್ಕೆ ಹೋಗುವವರೇ ಇರಲಿಲ್ಲ. ಅನೇಕರು ಹಳ್ಳಿಯಿಂದ ಬಂದವರು ನಾವು ಇಂಥ ಕಡೆಗೆ ಹೋಗಬೇಕು ಎಂದು ಕೇಳಿದರೆ ನಾವು ಬರುವುದಿಲ್ಲವೆಂದು ಆಟೋದವರು ಹೇಳುತ್ತಿದ್ದರು. ಆಗ ಅವರನ್ನೇನು ಹಿಡಿದುಕೊಂಡು ಹೊಡೆಯುತ್ತಿದ್ದಿರಾ?

ಶ್ರೀ ಅರಗ ಜ್ಞಾನೇಂದ್ರ: ತಮ್ಮ ಪೊಲೀಸ್‌ರು ಮೊದಲು ಬಹಳ ಸಿಸ್ಟಮ್ಯಾಟಿಕ್ ಆಗಿ ಆಟೋದವರನ್ನು ನಿಲ್ಲಿಸಿ ಅವರಿಗೆ ಎಲ್ಲಿಗೆ ಹೋಗಬೇಕು ಎಂಬುದನ್ನು ಹೇಳಿ ಕಳಿಸುತ್ತಿದ್ದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಗಲಿ, ನಾನು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಈಗ ಇರುವ ವ್ಯವಸ್ಥೆ ಸರಿಯಾಗಿದೆ. ಈ ಮೊದಲು ನಾವು ರೈಲ್ವೆ ನಿಲ್ದಾಣದಿಂದ ಶಾಸಕರ ಭವನಕ್ಕೆ ಬರಬೇಕೆಂದರೆ ಸಾಲಿನಲ್ಲಿ ನಿಲ್ಲಬೇಕಾಗಿತ್ತು. ಆ ರೀತಿ ಸಾಲಿನಲ್ಲಿ ನಿಂತು ಬಂದಾಗ ಆಟೋದವರು ಬರುತ್ತಿರಲಿಲ್ಲ. ಈಗ ನಾವು ಒಂದು ರೂಪಾಯಿ ಕೊಟ್ಟು ಟೋಕನ್ ತೆಗೆದುಕೊಂಡರೆ ಹದಿನೈದು ರೂಪಾಯಿ ಕೊಟ್ಟರೆ ಶಾಸಕರ ಭವನಕ್ಕೆ ಬಿಡುತ್ತಾರೆ. ಆದ್ದರಿಂದ ಈಗ ಇರುವ ಪ್ರೀ-ಪೇಡ್ ವ್ಯವಸ್ಥೆ ಸರಿಯಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಮೀಟರ್ ಹಾಕಿದ್ದರೆ ಹತ್ತು ರೂಪಾಯಿ ಇಲ್ಲದೆ ಹನ್ನೊಂದು ರೂಪಾಯಿ ಆಗುತ್ತಿತ್ತು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ : ಅದರ ಬಗ್ಗೆ ಬೇಕಾದರೆ ಪರಿಶೀಲನೆ ಮಾಡಿಸಿ. ಆದರೆ ಈಗ ಇರುವ ವ್ಯವಸ್ಥೆ ಬದಲಾವಣೆ ಮಾಡುವುದು ಬೇಡ. ಎಲ್ಲಿಗೆ ಹೋಗಬೇಕು ಎಂದೇನು ಅವರು ರೇಂಜ್ ಮಾಡಿದ್ದಾರೆ ಅದಕ್ಕೆ ನಾವು ಏನು ಹಣಕೊಡುತ್ತೇವೆ, ಅದು ಸರಿ ಇದೆ.

ಅಧ್ಯಕ್ಷರು : ಇಲ್ಲಿಗೆ ಈ ವಿಚಾರ ಮುಕ್ತಾಯವಾಯಿತು. ಇನ್ನು ನಿಯಮ 69ರ ಅಡಿಯಲ್ಲಿ ಅಲ್ಪಕಾಲಾವಧಿ ಚರ್ಚೆ.

(ಅ) ನಿಯಮ 69ರ ಮೇರೆಗೆ

ತೆಂಗಿನ ಮರಗಳಿಗೆ ತಗಲಿರುವ ನುಸಿ ರೋಗದ ಬಗ್ಗೆ

+ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ತೆಂಗಿನ ಬೆಳೆಗೆ ನುಸಿ ರೋಗ ಕಾಣಿಸಿಕೊಂಡು ಬೆಳೆ ಹಾನಿಯಾಗುತ್ತಿರುವುದರಿಂದ ಇಡೀ ರಾಜ್ಯದ ರೈತರು ಕಂಗಾಲಾಗಿದ್ದಾರೆ. ಅವರ ಭವಿಷ್ಯದ ಬಗ್ಗೆ ಚಿಂತನೆಯಾಗಿದೆ. ಇಲ್ಲಿ ತೋಟಗಾರಿಕೆಯ ಅಧಿಕಾರಿಗಳು ಕಾಣುತ್ತಿಲ್ಲ. ಸದನದಲ್ಲಿ ಬಹಳ ಮಹತ್ವವಾದ ವಿಚಾರ ಚರ್ಚೆಯಾಗುತ್ತಿದೆ. ಆದ್ದರಿಂದ ಮಾನ್ಯ ತೋಟಗಾರಿಕಾ ಸಚಿವರು ದಯಮಾಡಿ ಹಿರಿಯ ಅಧಿಕಾರಿಗಳನ್ನು ಕರೆಸಬೇಕು. ಕಾರ್ಯದರ್ಶಿಗಳು ಇತರೆ ಅಧಿಕಾರಿಗಳು ಯಾರು ಸದನದಲ್ಲಿ ಹಾಜರಿ ಇಲ್ಲ. ದಯಮಾಡಿ ಅವರನ್ನು ಹೇಳ ಕರೆಸಿ. ತೆಂಗಿನ ಬೆಳೆಗೆ ಕಪ್ಪುತಲೆ ಹುಳುವಿನ ರೋಗವಿತ್ತು, ಆ ರೋಗದ ಬೆನ್ನ ಹಿಂದೆಯೇ ನುಸಿ ರೋಗ ಬಂದಿದೆ. ಇದು ಒಂದು ರೀತಿಯಲ್ಲಿ ತೆಂಗಿನ ಬೆಳೆಗೆ ಬರುವ ಭಾದೆ. ಜೇಡರ ಜಾತಿಗೆ ಸೇರಿದಂಥ ಹುಳುಗಳು ಒಂದೂ, ಒಂದೂವರೆ ತಿಂಗಳ ಕಾಯಿಯ ತೊಟ್ಟಿಗೆ ಹಳದಿ ಬಣ್ಣದ ರೂಪದಲ್ಲಿ ಅಂಟುತ್ತದೆ. ಇದು ಬಹಳ ಸೂಕ್ಷ್ಮವಾಗಿರುವಂಥ ಹುಳ. ಇದು ಎಷ್ಟು ಸೂಕ್ಷ್ಮವಾದುದೆಂದರೆ ಒಂದು ಚುಕ್ಕೆಯನ್ನು ಇಟ್ಟರೆ ಆ ಸ್ಥಳದಲ್ಲೆ ಹದಿನೈದು ಇಪ್ಪತ್ತು ಕ್ರಿಮಿಗಳು ಇರುತ್ತವೆ. ಇದು ಬೆಳಿಗ್ಗೆಯ ಸಮಯದಲ್ಲಿ ಗೊತ್ತಾಗುವುದಿಲ್ಲ, ರಾತ್ರಿವೇಳೆಯಲ್ಲಿ ಕಾಣಿಸುತ್ತದೆ. ಮೊದಲು ಹಳದಿ ಬಣದಿಂದ ಬಂದು ಅನಂತರ ಕಂಡು ಬಣ್ಣಕ್ಕೆ ಪರಿವರ್ತನೆಯಾಗಿ ಇಡೀ ಬೆಳೆಯನ್ನೇ ನಾಶ ಮಾಡತಕ್ಕಂಥ ಭಯಂಕರವಾದ ಪೀಡೆಯಾಗಿದೆ. ಇದು ಕೇವಲ ಭಾರತಕ್ಕೆ ಅಥವಾ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುವ ರೋಗವಲ್ಲ. ಇದು ವಿಶ್ವವಿಖ್ಯಾತಿಯಾಗಿರುವಂಥ ರೋಗ. ಇದು ಕೇವಲ ಒಂದೆರಡು ವರ್ಷದಲ್ಲಿ ಕಂಡುಬಂದಿದ್ದಲ್ಲ. ಇದು ಮೊದಲು 1965ರಲ್ಲಿ ಮೆಕ್ಸಿಕೋದಲ್ಲಿ ಕಾಣಿಸಿಕೊಂಡಿತು, ಅನಂತರ 1967ರಲ್ಲಿ ಕೆಮರೂನ್ ದೇಶದಲ್ಲಿ ಕಾಣಿಸಿಕೊಂಡಿತು. ನಂತರ 1971ರಲ್ಲಿ ಕೊಲಂಬಿಯಾದಲ್ಲಿ, 1972ರಲ್ಲಿ ಕ್ಯೂಬಾದಲ್ಲಿ, 1989ರಲ್ಲಿ ಬ್ರೆಜಿಲ್‌ನಲ್ಲಿ ಕಂಡುಬಂದಿತ್ತು. ನಮ್ಮ ಭಾರತ ದೇಶದಲ್ಲಿ ಮೊದಲು ಕೇರಳ ರಾಜ್ಯದಲ್ಲಿ 1996ನೇಇಸವಿಯಲ್ಲಿ ಕಾಣಿಸಿಕೊಂಡಿತು. ಕೇರಳ, ಕರ್ನಾಟಕ, ತಮಿಳುನಾಡು ಈ ಮೂರು ರಾಜ್ಯಗಳಲ್ಲಿ ಬಹಳ ಪ್ರಮುಖವಾಗಿ ಬೆಳೆಯುವ ಬೆಳೆ ತೆಂಗಿನ ಬೆಳೆಯಾಗಿದೆ. ಭಾರತದ 45ರಷ್ಟು ಭಾಗ ತೆಂಗನ್ನು ಕೇರಳದಲ್ಲಿ ಬೆಳೆಯುತ್ತಾರೆ, ನಲವತ್ತರಷ್ಟು ಭಾಗವನ್ನು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಬೆಳೆಯುತ್ತಾರೆ. ಈ ಮೂರು ರಾಜ್ಯಗಳಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ರೈತರು, ಸಣ್ಣ